ಆರ್‌ಬಿಐ/2006-07/139
ಡಿಬಿಓಡಿ.ಸಂ.ಎಲ್.ಇಜಿ.ಬಿಸಿ.32/09.07.005/2006-07 ಅಕ್ಟೋಬರ್ 4, 2006

ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ)

ಮಾನ್ಯರೇ,

**ಗ್ರಾಹಕ ಸೇವೆ – ಪಾಸ್ ಬುಕ್‌ಗಳನ್ನು ಉಳಿತಾಯ ಖಾತೆದಾರರಿಗೆ(ವ್ಯಕ್ತಿಗಳಿಗೆ) ವಿತರಿಸದಿರುವ ಬಗ್ಗೆ**

ಅನೇಕ ಬ್ಯಾಂಕುಗಳು ಉಳಿತಾಯ ಬ್ಯಾಂಕ್ ಖಾತೆದಾರರಿಗೆ(ವ್ಯಕ್ತಿಗಳಿಗೆ) ಪಾಸ್ ಬುಕ್ ವಿತರಿಸುವುದನ್ನು ನಿಲ್ಲಿಸಿರುವುದರ ಬಗ್ಗೆ ಗ್ರಾಹಕರು ಮತ್ತು ಹಿರಿಯನಾಗರೀಕರ ಸಂಘದಿಂದ ಮನವಿಗಳನ್ನು ನಾವು ಸ್ವೀಕರಿಸುತ್ತಿದ್ದೇವೆ. ಖಾತೆದಾರರಿಗೆ ಅನುಕೂಲ ಉಂಟುಮಾಡುವ ಪಾಸ್ ಬುಕ್‌ಗಳನ್ನು ವಿತರಿಸುವ ವ್ಯವಸ್ಥೆಯನ್ನು ನಿಲ್ಲಿಸಿರುವ ಈ ನಿರ್ಧಾರವು ಬ್ಯಾಂಕುಗಳ ಏಕಪಕ್ಷೀಯ ಕ್ರಮವಾಗಿದೆಯೆಂಬುದನ್ನು ಗುರುತಿಸಲಾಗಿದೆ, ದಿನಾಂಕ ಏಪ್ರಿಲ್ 10, 2004ರಲ್ಲಿ ನೀಡಲಾದ ನಮ್ಮ ಸುತ್ತೋಲೆ ಡಿಬಿಓಡಿ.ಸಂ.ಎಲ್‌ಇಜಿ.ಬಿಸಿ. 74/09.07.005/2004-05 ರಲ್ಲಿ ಸೂಚಿಸಿರುವಂತೆ ತಿಂಗಳಿಗೊಮ್ಮೆ ಉಳಿತಾಯ ಖಾತೆಯ ಲೆಕ್ಕ ವಿವರಣಾ ಪಟ್ಟಿಯನ್ನು ನೀಡದೆ ಮೂರು ತಿಂಗಳಿಗೊಮ್ಮೆ ನೀಡುತ್ತಿರುವ ಅಭ್ಯಾಸವನ್ನು ಮಾಡಿಕ್ಕೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ.

2. ಪಾಸ್ ಬುಕ್‌ಗಳು ಹಣಕಾಸು ವ್ಯವಹಾರಗಳ ಸಿದ್ಧ ಕೋಷ್ಟಕಗಳಾಗಿದ್ದು ಸಣ್ಣ ಗ್ರಾಹಕರಿಗೂ ಚಿಕ್ಕದಾಗಿ ಕೈಗೆ ಸಿಗುವಂತಿರುವುದರಿಂದ ಅನುಕೂಲವಾಗುತ್ತಿದೆಯೆಂಬುದನ್ನು ಈ ಸಂಬಂಧವಾಗಿ ಹೇಳಬಹುದು. ಉಳಿತಾಯ ಖಾತೆಯ ಲೆಕ್ಕ ವಿವರಣಾ ಪಟ್ಟಿಯ ಬಳಕೆಯಲ್ಲಿ ಕೆಲವು ತೊಂದರೆಗಳಿರುತ್ತವೆ: (ಎ) ಇವುಗಳನ್ನು ಕ್ರಮಬದ್ಧವಾಗಿ ಜೋಡಿಸಬೇಕಾಗುತ್ತದೆ (ಬಿ) ಹಳೆಯ ವಿವರಣಾ ಪಟ್ಟಿಯ ಮುಕ್ತಾಯ ಶಿಲ್ಕಿನೊಂದಿಗೆ ಹೊಸ ವಿವರಣಾಪಟ್ಟಿಯ ಆರಂಭದ ಶಿಲ್ಕನ್ನು ತಾಳೆ ನೋಡಬೇಕಾಗುತ್ತದೆ (ಸಿ) ಅಂಚೆಯ ಮೂಲಕ ವಿವರಣಾ ಪಟ್ಟಿಯನ್ನು ಕಳಿಸುವಾಗ ಅದು ಮಧ್ಯದಲ್ಲಿ ಕಳೆದು ಹೋಗುವ ಸಂಭಾವ್ಯತೆಯು ಸಾಮಾನ್ಯವಾಗಿ ಇರುತ್ತದೆ. ಅಂತಹ ಸಂದರ್ಭದಲ್ಲಿ ನಕಲು ಪ್ರತಿಯನ್ನು ಪಡೆಯುವುದು ಖರ್ಚು ಮತ್ತು ಅನಾನುಕೂಲತೆಯನ್ನು ಒಳಗೊಳ್ಳುತ್ತದೆ (ಡಿ) ಎಟಿಎಮ್‌ನ ಚೀಟಿಗಳು ಎರಡು ವಿವರಣಾ ಪಟ್ಟಿಗಳ ನಡುವೆ ಬಂದಾಗ ತೃಪ್ತಿಕರವಾಗಿರುವುದಿಲ್ಲ ಏಕೆಂದರೆ ವ್ಯವಹಾರಗಳ ಪೂರ್ಣವಿವರ ಇದರಿಂದ ದೊರೆಯುವುದಿಲ್ಲ (ಇ) ಇಂಟರ್ ನೆಟ್, ಕಂಪ್ಯೂಟರುಗಳ ಸೌಲಭ್ಯದಿಂದ ವಂಚಿತರಾದ ಸಣ್ಣ ಗ್ರಾಹಕರ ಸಂಖ್ಯೆ ದೊಡ್ಡದಾಗಿರುವುದರಿಂದ ಅಂತಹ ಗ್ರಾಹಕರಿಗೆ ಪಾಸ್ ಬುಕ್ ನೀಡದಿರುವುದರಿಂದ ಅವರನ್ನು ಪರೋಕ್ಷವಾಗಿ ಹಣಕಾಸಿನ ಪರಿಧಿಯಿಂದ ಹೊರಗಿಟ್ಟಂತಾಗುತ್ತದೆ.

3. ಎಲ್ಲಾ ಉಳಿತಾಯ ಖಾತೆದಾರರಿಗೆ(ವ್ಯಕ್ತಿಗಳಿಗೆ) ಪಾಸ್ ಬುಕ್ ಸೌಲಭ್ಯವನ್ನು ತಪ್ಪದೆ ನೀಡಬೇಕೆಂದು ಎಲ್ಲಾ ಬ್ಯಾಂಕುಗಳಿಗೂ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಬ್ಯಾಂಕುಗಳು ವಿವರಣಾಪಟ್ಟಿಯನ್ನು ನೀಡುವ ವ್ಯವಸ್ಥೆಯನ್ನು ಮಾಡಿಕೊಂಡಲ್ಲಿ ಗ್ರಾಹಕರೂ ಕೂಡ ಲೆಕ್ಕದ ವಿವರಣಾಪಟ್ಟಿಯನ್ನೇ ಪಡೆಯುವ ಆಯ್ಕೆಯನ್ನು ಮಾಡಿಕೊಂಡರೆ ಆಗ ಬ್ಯಾಂಕುಗಳು ತಿಂಗಳಿಗೊಮ್ಮೆ ಈ ವಿವರಣಾ ಪಟ್ಟಿಯನ್ನು ನೀಡಬೇಕೆಂಬುದನ್ನು ಏಪ್ರಿಲ್ 10, 2004ರ ನಮ್ಮ ಸುತ್ತೋಲೆ ಡಿಬಿಓಡಿ.ಸಂ.ಎಲ್‌ಇಜಿ.ಬಿಸಿ. 74/09.07.005/2004-05 ರನ್ವಯ ತಿಳಿಸಲಾಗಿದೆ. ಆ ಪಾಸ್ ಬುಕ್ ಮತ್ತು ವಿವರಣಾ ಪಟ್ಟಿಯನ್ನು ನೀಡಲು ಗ್ರಾಹಕರಿಗೆ ಯಾವುದೇ ಶುಲ್ಕ ವಿಧಿಸಕೂಡದು.

4. ದಯವಿಟ್ಟು ಇದರ ಸ್ವೀಕೃತಿಯನ್ನು ದೃಢೀಕರಿಸಿ.

ವಿಶ್ವಾಸದಿಂದ,

(ಪ್ರಶಾಂತ ಶರಣ್)
ಪ್ರಭಾರಿ – ಮುಖ್ಯ ಮಹಾವ್ಯವಸ್ಥಾಪಕರು